7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು:– ವಿಶ್ವವಿದ್ಯಾಲಯ...

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು):– ವಿಶ್ವವಿದ್ಯಾಲಯದ್ದು ಇನ್ನೂ ಉತ್ತರ ಬಂದಿಲ್ಲ. ಉತ್ತರವನ್ನು ಒದಗಿಸುತ್ತೇನೆ.

ಅಧ್ಯಕ್ಷರು:– ಆಯಿತು. ಬಿ.ವೈ. ರಾಘವೇಂದ್ರ.

1. ವಿಷಯ: ರೈತರ ಸರಣಿ ಸಾವಿನ ಬಗ್ಗೆ

ಶ್ರೀ ಬಿ.ವೈ. ರಾಘವೇಂದ್ರ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರಣಿ ರೈತರ ಸಾವಿನ ಬಗ್ಗೆ ಕಳೆದ ಒಂದು ವಾರದಿಂದ ಸಾಕಷ್ಟು ವಿಷಯಗಳು ಚರ್ಚೆ ಆಗಿದೆ. ಸಾವು ಅದಂಥವರಿಗೆ ಎ.ಸಿ. ಮಟ್ಟದಲ್ಲಿ ಕಮಿಟಿ ಇದೆ. ಅದರ ಮೂಲಕ ಸರ್ಕಾರದಿಂದ ಪರಿಹಾರ ಕೊಡುವಂಥ ಪ್ರಯತ್ನಗಳು ಆಗುತ್ತಿವೆ. ಆದರೆ, ಇಲ್ಲಿ ಏನಾಗುತ್ತಿದೆ ಎಂದರೆ, ಆತ್ಮಹತ್ಯೆಗೆ ಪ್ರಯತ್ನ ಮಾಡಿ, ಈ ಕಡೆ ದೇವರ ದಯೆಯಿಂದ ತೀರಿಕೊಂಡಿಲ್ಲ. ಬದುಕಿದ್ದಾನೆ.

ಅಧ್ಯಕ್ಷರು:– ಈಗ ತಾವು ಅದನ್ನು ಏತಕ್ಕೆ ಕೇಳಿದ್ದೀರಿ?

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಅಧ್ಯಕ್ಷರೆ, ಅದನ್ನೇ ಕೇಳಿರುವುದು.

ಅಧ್ಯಕ್ಷರು:– ಮಾನ್ಯ ಸಚಿವರನ್ನು ಕೇಳಿ.

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಅಧ್ಯಕ್ಷರೆ, ಅವರು ಆತ್ಮಹತ್ಯೆಗೆ ಪ್ರಯತ್ನ ಮಾಡಿ ಮೈ, ಕೈ ಸುಟ್ಟುಕೊಂಡು ಮನೆಗೂ ಭಾರ, ಸಮಾಜಕ್ಕೂ ಭಾರವಾಗಿ ಪಾಪ ಆ ರೈತ, ಈಗ ಉಳಿದುಕೊಂಡಿದ್ದಾನೆ. ನಮ್ಮ ಶಿವಮೊಗ್ಗದ ಒಂದು ಗ್ರಾಮದಲ್ಲಿ ಮೊನ್ನೆ ದಿವಸ ಇಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನ ಮಾಡಿದರು. ಅವರು ಬದುಕಿದ್ದಾರೆ. ಅಂಥವರಿಗೆ ಪರಿಹಾರ

ಕೊಡುವ ದಿಕ್ಕಿನಲ್ಲಿ ಏನಾದರೂ ಒಂದು ಪ್ರಯತ್ನ ಮಾಡಬಹುದು ಎಂದು ನನ್ನ ಮನವಿ ಅಷ್ಟೇ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವುದರಲ್ಲಿ ಅರ್ಥವಿದ್ದರೂ ಸಹ ನಿಯಮಗಳ ಪ್ರಕಾರ ನಾವು ತೀರ ದುರ್ಘಟನೆ ಆದಂಥ ಸಂದರ್ಭದಲ್ಲಿ ಪರಿಹಾರ ಕೊಡುತ್ತೇವೆ. ಈಗ ಅವರು ಬದುಕಿ ಉಳಿದಿದ್ದಾರೆ. ಮಾನ್ಯ ರಾಘವೇಂದ್ರರವರು ಅವರಿಗೆ ಏನಾದರೂ ನೆರವು ಮಾಡಿ ಎಂದು ತಾವು ಹೇಳುತ್ತಿದ್ದಾರೆ. ಅವರ ವೈದ್ಯಕೀಯ ವೆಚ್ಚಗಳನ್ನು ಭರಿಸುವುದಕ್ಕೆ ತಾವು ಹಾಗೂ ನೀವು ಇಬ್ಬರು ಹೋಗಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮನವಿ ಮಾಡಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ವಿಶೇಷ ಪ್ರಕರಣ ಎಂದು ಹೇಳಿ ನಾನೂ ನಿಮ್ಮ ಜೊತೆ ಬರುತ್ತೇನೆ. ಇಬ್ಬರೂ ಸೇರಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸ್ವಲ್ಪ ಹಣ ಕೊಡಿಸೋಣ.

ಅಧ್ಯಕ್ಷರು:– Ok. ಗುರು ಪಾಟೀಲ್ ಶಿರವಾಳರವರು ಹೇಳಿ.

ಶ್ರೀ ಗುರುಪಾಟೀಲ್ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ, 3ನೇ ತಾರೀಖಿನ ದಿವಸ ಶುಕ್ರವಾರದಂದು ಬೆಳಿಗ್ಗೆ ಶಹಾಪುರ. . .

ಅಧ್ಯಕ್ಷರು:– ಮಾನ್ಯ ಗೃಹ ಸಚಿವರು. ಉತ್ತರ ಹೇಳಿ.

ಡಾ. ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಸಚಿವರು ಆ ಮನೆಯಲ್ಲಿದ್ದಾರೆ. ಅವರು ಬಂದ ಮೇಲೆ ಉತ್ತರ ತರಿಸಿಕೊಡುತ್ತೇವೆ.

ಅಧ್ಯಕ್ಷರು:– ಕೆ.ಎಸ್. ಪುಟ್ಟಣ್ಣಯ್ಯ, ಇಲ್ಲ.

(ಮಾನ್ಯ ಸದಸ್ಯರು ಸದನದಲ್ಲಿ ಗೈರು ಹಾಜರಾಗಿದ್ದರು)

ಅಧ್ಯಕ್ಷರು:– ಮಾನ್ಯ ಸಿ.ಟಿ. ರವಿ.